# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ



## ಮದ್ಯದ ದಾಸಾನುದಾಸ ಹರಿಲಾಲ

ಅದೆಷ್ಟೋ ಬಾರಿ ಕಂಪನಿಯ ಕೆಲಸದ ನಿಮಿತ್ತ ಹೊರಗೆ ಹೋಗುತ್ತಿದ್ದೇನೆಂದು ದಾಖಲೆಯಲ್ಲಿ ಮಾತ್ರ ತೋರಿಸಿ, ತಾನು ಕೋಣೆಯಲ್ಲಿ ಮದ್ಯವನ್ನು ಸೇವಿಸುತ್ತಾ ಬಿದ್ದಿರುತ್ತಿದ್ದ. ಇಷ್ಟೆಲ್ಲಾ ಘಟನೆಯ ನಂತರವೂ ಅವನು ಮಾಡುತ್ತಿದ್ದ ಸಾಬೂನು ಮಾರಾಟ, ತನ್ನಿಂದಾಗಿಯೇ ಹೆಚ್ಚಿತ್ತು ಎಂಬುದು ಅವನಿಗೆ ತಿಳಿದಿತ್ತು. ಗೋದರೇಜ್ ಕಂಪನಿಗೆ ಇದು ಸಂತಸದ ಸಂಗತಿಯಾಗಿತ್ತು. ಈ ಕಾರಣದಿಂದಾಗಿ ಕಂಪನಿಯ ಕಚೇರಿಗೆ ಹಾಜರಾಗುವಲ್ಲಿ ಅನಾನುಕೂಲಗಳು ಎದುರಾದಾಗ, ಅದನ್ನೂ ಸಹ ಗೋದರೇಜ್ ಸೇಠ್ ನಿರ್ವಹಿಸುತ್ತಿದ್ದರು. ಹರಿಲಾಲ ರಾಷ್ಟ್ರಪಿತರಾಗಿದ್ದವರ ಮಗನಾಗಿದ್ದ. ಇನ್ನು ಕೆಲಸ ಕಾರ್ಯಗಳ ವಿಚಾರದಲ್ಲಿ ಅವನು ಒಳ್ಳೆಯ ಫಲಿತಾಂಶಗಳನ್ನೇ ಕೊಟ್ಟಿದ್ದ. ಗೋದರೇಜ್ ಸೇಠ್ ಅವರಿಗೆ ಇದು ಅತ್ಯಂತ ಮಹತ್ವದ ಸಂಗತಿಯಾಗಿತ್ತು. ಅವನ ಗೈರುಹಾಜರಿಯ ಸಂಬಳವನ್ನೂ ಸಹ ಕಂಪನಿ, ಕಣ್ಣುಗಳನ್ನು ಮುಚ್ಚಿಕೊಂಡು ನೀಡುತ್ತಿತ್ತು.

ಈಗ ಹರಿಲಾಲ ರಾಜಕೋಟದಿಂದ ತನ್ನ ಮಕ್ಕಳನ್ನು ಮುಂಬೈಗೆ ಕರೆಸಿಕೊಳ್ಳಲು ನಿಶ್ಚಯಿಸಿದ. ಅವನು ಬಲಿ ಬಹನಳಿಗೆ ಪತ್ರವನ್ನು ಬರೆದು ತನ್ನಾಸೆಯನ್ನು ವ್ಯಕ್ತಪಡಿಸಿದ. ಅಲ್ಲದೆ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿ ನನ್ನದು, ಕಾಂತಿಗೆ ನಾನು ಉತ್ತಮ ಶಿಕ್ಷಣವನ್ನು ಕೊಡಿಸಲು ಬಯಸುತ್ತೇನೆ. ಅವನಿಗೆ ಹಾಸ್ಟಲ್ ವ್ಯವಸ್ಥೆಯನ್ನೂ ಮಾಡುತ್ತೇನೆ. ನನ್ನ ಜೀವನ ತಪ್ಪು ಹಾದಿಯಲ್ಲಿ ಸಾಗಿದೆ, ಆದರೆ ನನ್ನ ಮಕ್ಕಳು ಅಂಥ ಹಾದಿಯಲ್ಲಿ ಸಾಗಬಾರದು... ಇತ್ಯಾದಿ...ಇತ್ಯಾದಿ.. ಎಂದೂ ಬರೆದ. ಅದರೊಂದಿಗೆ ಬಾಪೂ ಅವರಿಗೂ ಪ್ರತ್ಯೇಕವಾಗಿ ಪತ್ರವನ್ನು ಬರೆದು ತನ್ನ ತೀರ್ಮಾನವನ್ನು ತಿಳಿಸಿದ. ಬಲಿ ಬಹನಳ ಮನೆಯಿಂದ ಮಕ್ಕಳನ್ನು ಇಲ್ಲಿಗೆ ಕರೆತರುವ ವ್ಯವಸ್ಥೆಯನ್ನು ಮಾಡಿ, ನನ್ನ ಮಕ್ಕಳು ನನ್ನ ದೃಷ್ಟಿಕೋನದಂತೆ ಬದುಕಬೇಕು ಎಂಬುದು ನನ್ನಾಸೆ, ನೀವು ಅದಕ್ಕೆ ಯೋಗ್ಯ ವ್ಯವಸ್ಥೆಯನ್ನು ಮಾಡಿ ಎಂದೂ ಪತ್ರದಲ್ಲಿ ನಿವೇದಿಸಿದ. ಆದರೆ ಆ ಸಮಯದಲ್ಲಿ ಮಕ್ಕಳು ರಾಜಕೋಟದಲ್ಲಿ ಬಲಿ ಬಹನಳ ಬಳಿ ಇರಲಿಲ್ಲ. ಅವರು ಅಹಮದಾಬಾದ್‌ನಲ್ಲಿ ಬಾ ಮತ್ತು ಬಾಪೂ ಅವರ ಬಳಿ ಆಶ್ರಮದಲ್ಲಿ ವಾಸಿಸುತ್ತಿದ್ದರು.

### ಇಪ್ಪತ್ತೊಂಬತ್ತು

ಹರಿಲಾಲ ಮಕ್ಕಳನ್ನು ತನ್ನ ಬಳಿಗೆ ಕರೆ ತರುವ ಬಗ್ಗೆ ಯೋಚಿಸಿದಾಗಿನಿಂದಲೇ ವ್ಯಗ್ರನಾಗಿದ್ದ. ಅವನು ರಾಜಕೋಟದಲ್ಲಿದ್ದಾಗ ಬಲಿ ಬಹನ್ ಆ ದಿನಗಳಲ್ಲಿ ಅವನೊಂದಿಗೆ ಅನುಚಿತವಾಗಿ ವರ್ತಿಸಿದ್ದಳು ಎಂಬುದು ಅವನಿಗೆ ಒಂದೇ ಸಮನೆ ನೆನಪಾಗುತ್ತಿತ್ತು. ಮಕ್ಕಳು ಆಶ್ರಮದಲ್ಲಿ ಬಾ ಮತ್ತು ಬಾಪೂ ಅವರ ಬಳಿಗೆ ಬಂದು ಹೋಗುವ ವಿಷಯ ಹರಿಲಾಲನಿಗೂ ತಿಳಿದಿತ್ತು. ಆದರೆ ಅವರಿಗೆ ಆಶ್ರಮದಲ್ಲಿ ಕೊಡಲಾಗುತ್ತಿದ್ದ ಶಿಕ್ಷಣದ ಬಗ್ಗೆ ಅವನಿಗೆ ತುಂಬಾ ಅಸಮಾಧಾನವಿತ್ತು. ಹರಿಲಾಲ ತನ್ನ ಜ್ಯೇಷ್ಠ ಪುತ್ರನನ್ನು ವೈದ್ಯನನ್ನಾಗಿ ಮಾಡಲು ಬಯಸುತ್ತಿದ್ದ, ಈಗ ಅದಕ್ಕೆ ತಗಲುವ ಖರ್ಚನ್ನು ಪೂರ್ಣ ಪ್ರಮಾಣದಲ್ಲಿ ಭರಿಸುವ ಸಾಮರ್ಥ್ಯ ಅವನಿಗಿತ್ತು.

ಆದರೆ ರಾಜಕೋಟದಿಂದ ಬಲಿ ಬಹನಳ ಮತ್ತು ಅಹಮದಾಬಾದ್‌ನಿಂದ ಬಾಪೂ ಅವರ ಪತ್ರವನ್ನು ಓದಿನ ನಂತರ ಹರಿಲಾಲನ ರೋಷ ಉಕ್ಕಿತು. ಅವನಿಂದ ಮಕ್ಕಳ ಪೋಷಣೆಯನ್ನು ಮಾಡಲು ಸಾಧ್ಯವೇ? ಎಂಬ ಅನುಮಾನವನ್ನು ಬಲಿ ಬಹನ್ ವ್ಯಕ್ತಪಡಿಸಿದ್ದಳು. ಅಷ್ಟೇ ಅಲ್ಲ ಅವಳು ಪತ್ರದಲ್ಲಿ, ಹರಿಲಾಲ ಮಕ್ಕಳ ಪೋಷಣೆ ಮಾಡುವಲ್ಲಿ ಅಸಮರ್ಥನಂತೂ ಹೌದು, ಅಲ್ಲದೆ ಹರಿಲಾಲನ ವರ್ತಮಾನದ ಜೀವನ ದುರ್ವ್ಯಸನಗಳು ಮತ್ತು ಕೆಟ್ಟ ಅಭ್ಯಾಸಗಳಿಂದ ಸಾಗುತ್ತಿದೆ, ಮಕ್ಕಳು ಅವನೊಂದಿಗಿದ್ದರೆ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವ ಸಂಭವ ಹೆಚ್ಚು ಎಂದೂ ಆತಂಕವನ್ನು ವ್ಯಕ್ತಪಡಿಸಿದ್ದಳು. ಅಲ್ಲದೆ ಈಗ ಹರಿಲಾಲನ ಮಕ್ಕಳು ರಾಜಕೋಟದಲ್ಲಿ ತನ್ನೊಂದಿಗಿಲ್ಲ, ಅವರು ಬಾ ಮತ್ತು ಬಾಪೂ ಅವರೊಂದಿಗೆ ಸಾಬರಮತಿ ಆಶ್ರಮದಲ್ಲಿದ್ದಾರೆ